# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 24 |
| ಸದಸ್ಯರ ಹೆಸರು | ಶ್ರೀ ವೈ ಎಂ. ಸತೀಶ್<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 05-03-2025 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಂದಾಯ ಇಲಾಖೆಯಿಂದ ವಂಶವೃಕ್ಷ ನೀಡಲು ಇರುವ ಮಾನದಂಡಗಳೇನು; ರಾಜ್ಯದಲ್ಲಿ ವಂಶವೃಕ್ಷ ಪಡೆಯಲು ಎಲ್ಲಾ ಜಿಲ್ಲೆಗಳಲ್ಲೂ ಒಂದೇ ಮಾದರಿಯ ದಾಖಲೆಗಳನ್ನು ಪಡೆಯಲಾಗುತ್ತಿದೆಯೇ; ಇದ್ದಲ್ಲಿ ವಂಶವೃಕ್ಷ ಪಡೆಯಲು ಬೇಕಾಗಿರುವ ದಾಖಲೆಗಳು ಯಾವುವು; (ಸರ್ಕಾರದ ಆದೇಶದ ಪ್ರತಿಗಳೊಂದಿಗೆ ಒದಗಿಸುವುದು) | ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ವಂಶವೃಕ್ಷ ಪಡೆಯಲು ಒಂದೇ ಮಾದರಿಯ ಮಾನದಂಡಗಳನ್ನು ನಿಗದಿಪಡಿಸಲಾಗಿದೆ. ವಂಶವೃಕ್ಷ ಪಡೆಯಲು ಸಲ್ಲಿಸಬೇಕಾಗಿರುವ ದಾಖಲೆಗಳು ಈ ಕೆಳಕಂಡಂತಿವೆ:-<br><br>1. ಪಡಿತರ ಚೀಟಿ, ಅಥವಾ ಮತದಾರರ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್<br>2. ಅರ್ಜಿ ನಮೂನೆಯಲ್ಲಿ ಸ್ವಯಂ ಘೋಷಿತ ಪತ್ರ<br><br>**ವಂಶವೃಕ್ಷ ನೀಡಲು ಅನುಸರಿಸುವ ಕಾರ್ಯ ವಿಧಾನ:** ಮೇಲ್ಕಂಡ ದಾಖಲೆಗಳೊಂದಿಗೆ ಗ್ರಾಮಲೆಕ್ಕಿಗರು ಕ್ಷೇತ್ರ ಪರಿಶೀಲನೆ ಮಾಡಿದ ವರದಿಯ ಆಧಾರದ ಮೇಲೆ ಪ್ರಮಾಣ ಪತ್ರ ವಿತರಿಸುವುದು.<br><br>ಕಂದಾಯ ಇಲಾಖೆಯಿಂದ ವಂಶವೃಕ್ಷ ಪಡೆಯಲು ನಿಗದಿಪಡಿಸಿರುವ ಮಾನದಂಡ ಗಳನ್ವಯ ದಾಖಲೆಗಳನ್ನು ಪಡೆದು ವಂಶವೃಕ್ಷ ವಿತರಿಸುವಂತೆ ನಿರ್ದೇಶಿಸಲಾಗಿರುತ್ತದೆ. ಈ ಸಂಬಂಧ ಹೊರಡಿಸಿರುವ ಸುತ್ತೋಲೆಗಳನ್ನು **ಅನುಬಂಧ-1ರಲ್ಲಿ** ನೀಡಿದೆ. |
| ಆ) | ಕಂದಾಯ ಇಲಾಖೆಯ ಅಧಿಕಾರಿಗಳು ವಂಶವೃಕ್ಷ ನೀಡಲು ಒಂದೊಂದು ಜಿಲ್ಲೆಯಲ್ಲಿ ಒಂದೊಂದು ದಾಖಲೆಗಳನ್ನು ಕೇಳಲು ಕಾರಣಗಳೇನು; (ಮಾಹಿತಿ ಒದಗಿಸುವುದು) | |
| ಇ) | ವಂಶವೃಕ್ಷವನ್ನು ನೀಡಲು ನಲವತ್ತು ವರ್ಷಗಳ ಹಿಂದೆ ಮರಣ ಹೊಂದಿರುವವರ ಮರಣ ಪತ್ರ ಇಲ್ಲದಿರುವ ಸಂದರ್ಭದಲ್ಲಿ ಮತ್ತು | ಕಂದಾಯ ಇಲಾಖೆಯಿಂದ ನೀಡಲಾಗುತ್ತಿರುವ ವಂಶವೃಕ್ಷ ಪ್ರಮಾಣ ಪತ್ರವನ್ನು ವಿತರಿಸುವ ಸಂದರ್ಭಗಳಲ್ಲಿ ಸರ್ಕಾರದಿಂದ ನಿರ್ದಿಷ್ಟಪಡಿಸಿರುವ ನಮೂನೆಯಲ್ಲಿ ವಂಶವೃಕ್ಷ ವಿವರಗಳನ್ನು |

| ಕ್ರ ಸಂ | ಪ್ರಶ್ನೆ | ಉತ್ತರ |
| --- | --- | --- |
| | ಬೇರೆ ಯಾವುದೇ ದಾಖಲೆ ಇಲ್ಲದಿದ್ದಲ್ಲಿ ನೀಡಬೇಕಾಗಿರುವ ಪರ್ಯಾಯ ದಾಖಲೆ ಯಾವುದು; ಈ ಬಗ್ಗೆ ರಾಜ್ಯದ ಎಲ್ಲಾ ಜಿಲ್ಲೆಗಳಿಗೂ ಸುತ್ತೋಲೆ ಹೊರಡಿಸಲು ಇಲಾಖೆ ಕ್ರಮ ಕೈಗೊಳ್ಳುವುದೇ; (ಮಾಹಿತಿ ಒದಗಿಸುವುದು) | ಅರ್ಜಿದಾರರಿಂದಲೇ ಛಾಪಾ ಕಾಗದದ ಮೇಲೆ ಪಡೆದು ವಂಶವೃಕ್ಷದ ವಿವರಗಳನ್ನು ಗ್ರಾಮ ಲೆಕ್ಕಾಧಿಕಾರಿ ಹಾಗೂ ರಾಜಸ್ವ ನಿರೀಕ್ಷಕರುಗಳ ಬಳಿ ಲಭ್ಯವಿರುವ ದಾಖಲೆಗಳಿಗೆ ತಾಳೆ ಮಾಡಿದ ನಂತರ ಸಂಬಂಧಪಟ್ಟ ನಾಡಕಛೇರಿಯ ಉಪ ತಹಶೀಲ್ದಾರರಿಗೆ ವಂಶವೃಕ್ಷವನ್ನು ದೃಢೀಕರಣ ಮಾಡುವ ಅಧಿಕಾರವನ್ನು ನೀಡಲಾಗಿರುತ್ತದೆ.<br><br>ಈ ಸಂಬಂಧದ ಸುತ್ತೋಲೆಯನ್ನು **ಅನುಬಂಧ-2ರಲ್ಲಿ** ನೀಡಿದೆ. |
| ಈ) | ಕೆಲವು ತಾಲ್ಲೂಕುಗಳಲ್ಲಿ ಮರಣ ಪತ್ರ ಮತ್ತು ಆಧಾರ ಸಂಖ್ಯೆ ಇಲ್ಲವಾದ್ದಲ್ಲಿ ನ್ಯಾಯಾಲಯದ ಆದೇಶದ ಪ್ರತಿಯನ್ನು ತರುವಂತೆ ಅರ್ಜಿದಾರರಿಗೆ ಕೇಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದ್ದಲ್ಲಿ, ಇದನ್ನು ಸರಳೀಕೃತವಾಗಿ ಮಾರ್ಪಾಡು ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು? (ಮಾಹಿತಿ ಒದಗಿಸುವುದು) | ಮರಣ ಪತ್ರವನ್ನು ಕೆಲವು ಪ್ರಕರಣಗಳಲ್ಲಿ (ಮೃತರ ಕುಟುಂಬದ ಜೀವಂತ ಸದಸ್ಯರ ದೃಢೀಕರಣ ಪತ್ರ, ಸರ್ಕಾರಿ ನೌಕರಿಯಲ್ಲಿ ಇಲ್ಲದಿರುವ ದೃಢೀಕರಣ ಪತ್ರ, ಅನುಕಂಪದ ಆಧಾರದ ನೇಮಕಾತಿಗೆ ಆದಾಯ ಪ್ರಮಾಣ ಪತ್ರ ಇತ್ಯಾದಿ) ಮಾತ್ರ ಅರ್ಜಿದಾರರಿಂದ ಪಡೆಯಲಾಗುತ್ತಿದೆ. ವಂಶವೃಕ್ಷದ ಪ್ರಮಾಣ ಪತ್ರ ವಿತರಿಸುವುದನ್ನು ಸರಳೀಕರಣಗೊಳಿಸುವ ಕುರಿತು ಸೂಕ್ತ ಪ್ರಸ್ತಾವನೆ ಪಡೆದು ಪರಿಶೀಲಿಸಲಾಗುವುದು. |

**ಸಂಖ್ಯೆ: ಕಂಇ 16 ಎಜೆಎಸ್ 2025**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು

